**ಒ.ಎಸ್.ನಂಬ್ರ: 390/2018 ಪಿ .ಡಬ್ಲ್ಯೂ : 2**

ದಿನಾಂಕ: 20-12-2023 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲು: ಶ್ರೀ. ಎಂ.ಜೆ.ಎಸ್ ವಕೀಲರಿಂದ**

ವಾದಿ ನನ್ನ ತಮ್ಮ , ಈ ದಾವೆಯನ್ನು ನಾನು, 1 ರಿಂದ 3 ಮತ್ತು 5 ನೇ ಪ್ರತಿವಾದಿಗಳು ಒಟ್ಟಾಗಿ ಸೇರಿ ಹಾಕಿರುತ್ತೇವೆ ಎಂದರೆ ಸರಿ. ನಿಪಿ 1 ಪ್ರಕಾರ ದಾವಾ ಸ್ವತ್ತು ನಮ್ಮ ತಾಯಿ ಚಂದು ಹಂಡ್ತಿ ರವರ ಪಾಲಿಗೆ ಬಂದಿರುತ್ತದೆ. ನಿಪಿ 1 ರಂತೆ ನನ್ನ ಪಾಲಿಗೆ ಬಂದಿದ್ದ ಆಸ್ತಿಯನ್ನು ನಾನು 2 ವರ್ಷಗಳ ಹಿಂದೆ ಮದು ಎನ್ನುವವರಿಗೆ ಕ್ರಯ ಮಾಡಿದ್ದೇನೆ. ದಾವಾ ಸ್ವತ್ತಿನ ಪಹಣಿ ನಮ್ಮ ತಾಯಿ ಪವತಿಯಾದ ನಂತರ 4 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆಯಾಗಿರುತ್ತದೆ. ಸದರಿ ಪಹಣಿ OS 65/2002 ದಾಖಲಾಗುವ ಮೊದಲೇ ಬದಲಾವಣೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು 5 ನೇ ಪ್ರತಿವಾದಿ. ಆ ಕಾಲಕ್ಕೆ ಬೈಂದೂರು ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿದ್ದೆ. ಸದರಿ ದಾವೆಯ ತಿಳುವಳಿಕೆ ನನಗೆ ಜಾರಿಯಾಗಿತ್ತು ಎಂದರೆ ನನಗೆ ನೆನಪಿಲ್ಲ .ಸದರಿ ದಾವೆಯಲ್ಲಿ ನಾನು 1 ಮತ್ತು 4 ನೇ ಪ್ರತಿವಾದಿ ಒಬ್ಬರೇ ವಕೀಲರನ್ನು ನೇಮಿಸಿ ಆಕ್ಷೇಪ ಸಲ್ಲಿಸಿದ್ದೇವೆ ಎಂದರೆ ಸರಿ. ಸಾಕ್ಷಿಗೆ OS 65/2002 ರ ವಾದ ಪತ್ರ ಪ್ರತಿವಾದಿ ಪತ್ರ ಮತ್ತು ಮೆಮೊ ನ ದೃಢೀಕೃತ ನಕಲನ್ನು ತೋರಿಸಿದ್ದು ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಡಿ 1 ರಿಂದ 3 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ನಮ್ಮ ತಾಯಿ ಬರೆದಿಟ್ಟ ವೀಲುನಾಮೆಯನ್ನು ನಿಡಿ 1 ಎಂದು ಗುರುತಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಈ ದಾವೆಯ ಎಲ್ಲಾ ಪಕ್ಷಗಾರರು ಸೇರಿದ್ದರು ಎಂದರೆ ಸರಿ. ಸಾಕ್ಷಿಗೆ OS 65/2002 ರ ಆದೇಶ ಮತ್ತು ಡಿಕ್ರಿ ಯ ದೃಢೀಕೃತ ನಕಲನ್ನು ತೋರಿಸಿದ್ದು ಅದನ್ನು ನೋಡಿ 4 ನೇ ಪ್ರತಿವಾದಿ ತನಗೆ ತಿಳಿಸಿದ್ದರು ಎಂದು ನುಡಿದಿರುತ್ತಾರೆ ಆದ್ದರಿಂದ ಸದರಿ ದಾಖಲೆಯನ್ನು ನಿಡಿ 4 ವತ್ತು 5 ಎಂದು ಗುರುತಿಸಲಾಯಿತು.

ಈ ಮೇಲೆ ಹೇಳಿದ ಆದೇಶದ ಮೇಲೆ RA No. 56/2005 ಸಲ್ಲಿಸಿದ್ದು ನಾನು ಅದರಲ್ಲಿ 5 ನೇ ಎದುರುದಾರ ಎಂದರೆ ಸರಿ. ಸಾಕ್ಷಿಯು ಅದರ ಆದೇಶವನ್ನು ನೋಡಿ ಗುರುತಿಸಿದ್ದು ದಾಖಲೆಯನ್ನು ನಿಡಿ 6 ಎಂದು ಗುರುತಿಸಲಾಯಿತು. ಸದರಿ ಮೇಲ್ಮನವಿಯಲ್ಲೂ ನಾನು ಹಾಜರಾಗಿದ್ದೆ ಎಂದರೆ ಸರಿ. ಆದ್ದರಿಂದ ಸದರಿ ತೀರ್ಪು ಆದ ದಿನದಿಂದ ನನಗೆ ನಿಡಿ 3 ರ ಆದೇಶದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ಸದರಿ ವೀಲುನಾಮೆಯನ್ನು ನಾನು ಅಥವಾ ಚಂದು ಹಂಡ್ತಿಯ ಉಳಿದ ಮಕ್ಕಳು ಬೇರೆ ಎಲ್ಲೂ ಪಶ್ನಿಸಿಲ್ಲ. ನಿಡಿ 6 ರ ಆದೇಶ ಅಂತಿಮವಾಗಿದೆ ಎಂದರೆ ಸರಿ. ವೀಲುನಾಮೆಯ ಆದಾರದ ಮೇಲೆ 4 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಪಹಣಿಯನ್ನು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ . ಮೊದಲಿಗೆ ಸರ್ವೇ ನಂ. 5/3 ಎಂದು ಇದ್ದು 2012 ರಲ್ಲಿ 5/8 ಎಂದು

ಬದಲಾವಣೆ ಆಗಿದೆ ಎಂದರೆ ಸರಿ. ಸದರಿ ಪಹಣಿಯ ಆದಾರದ ಮೇಲೆ 4 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನತೆ ಅನುಭವಿಸಲು ನಾನು ಯಾವುದೇ ತಕರಾರು ಮಾಡಿಲ್ಲ. ಪ್ಲಾಟಿಂಗ್ ಮಾಡಿರುವುದು ಸರಿ ಇಲ್ಲದ ಕಾರಣ ನಮಗೂ ಮತ್ತು 4 ಪ್ರತಿವಾದಿಗೂ ತಕರಾರು ಆಗಿರುತ್ತದೆ . 2018 ರಲ್ಲಿ ದಾವಾ ಸ್ವತ್ತು ಮತ್ತು ಉಳಿಕೆ ಭಾಗ ನಿಪಿ 1 ರಂತೆ ಪ್ಲಾಟಿಂಗ್ ಆದದ್ದೂ ತಪ್ಪಾಗಿದೆ ಎಂದು 4 ನೇ ಪ್ರತಿವಾದಿ ಡಿಡಿ ಎಲ್ ಆರ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ಅದರಂತೆ ಸದರಿ ಪ್ಲಾಟಿಂಗ್‌ನ್ನು ರದ್ದುಗೊಳಿಸವಂತೆ ಕೋರಿರುತ್ತಾರೆ. ಅದಕ್ಕೆ ನಾವೆಲ್ಲರು ತಕರಾರು ಸಲ್ಲಿಸಿರುತ್ತೇವೆ ಕಾರಣ ಸದರಿ ಸ್ವತ್ತಿನಲ್ಲಿ ಓಡಾಡಲು ನಮಗೆ ರಸ್ತೆ ನೀಡಿರುವುದಿಲ್ಲ . ಇದೇ ಕಾರಣದಿಂದ ನಮ್ಮ ಮತ್ತು 4 ನೇ ಪ್ರತಿವಾದಿಯ ನಡುವೆ ತಕರಾರು ಆಯಿತು ಎಂದರೆ ಸರಿ. ಆ ಹಿನ್ನಲೆಯಲ್ಲಿ ಈ ದಾವೆಯನ್ನು ಸಲ್ಲಿಸಿದ್ದು ಎಂದರೆ ಸರಿ.

ನಮ್ಮ ತಾಯಿಗೆ 4 ನೇ ಪ್ರತಿವಾದಿ ಒಬ್ಬಳೇ ಮಗಳು ಎಂದರೆ ಸರಿ. ವಿವಾಹವಾದ ನಂತರ ನಾವು 5 ಜನ ಗಂಡು ಮಕ್ಕಳು ಪ್ರತ್ಯೇಕವಾಗಿ ನಮ್ಮ ಸಂಸಾರದೊಂದಿಗೆ ವಾಸವಿದ್ದೇವೆ ಎಂದರೆ ಸರಿ. ನಮ್ಮ ಮೂಲ ಮನೆಯಲ್ಲಿ ನಮ್ಮ ತಾಯಿಯೊಂದಿಗೆ 4 ನೇ ಪ್ರತಿವಾದಿ ವಾಸವಿದ್ದರು ಎಂದರೆ ಸರಿ . ತನ್ನ ಪೋಷಣೆ ಮಾಡಿದ ಕಾರಣ ನಮ್ಮ ತಾಯಿ 4 ನೇ ಪ್ರತಿವಾದಿ ಹೆಸರಿಗೆ ಸಾಕ್ಷಿಗಳ ಸಮಕ್ಷಮ ದಿಃ 15-04-2000 ರಂದು ವೀಲುನಾಮೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ . ನಮ್ಮ ತಾಯಿ ಪವತಿಯಾದ ನಂತರ ವೀಲುನಾಮೆಯ ಆದಾರದ ಮೇಲೆ 4 ನೇ ಪ್ರತಿವಾದಿಯ ಹೆಸರಿಗೆ ವೀಲುನಾಮೆ ಜಾರಿಗೆ ಬಂದ ನಂತರ ಪಹಣಿ ಬದಲಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ . ಸದರಿ ವಿಚಾರ ನಮ್ಮೆಲ್ಲ ಸಹೋದರರಿಗೆ ತಿಳಿದಿದ್ದು ನಾವು ಎಲೂ ಪ್ರಶ್ನಿಸಿಲ್ಲದೆ ಈಗ ನಮ್ಮ ಮತ್ತು 4 ನೇ ಪ್ರತಿವಾದಿ ನಡುವೆ ಬೇರೆ ತಕರಾರು ಇರುವ ಕಾರಣ ಆಕೆಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರ ವನ್ನು ವಾದಿಯ ವಕೀಲರ ಕಚೇರಿಯಲ್ಲಿ ತಯಾರಿಸಲಾಗಿದೆ . ಅದರಲ್ಲಿ ಬರೆಸಿರುವ ಎಲ್ಲಾ ವಿಚಾರ ಸುಳ್ಳು ಎಂದರೆ ಸರಿಯಲ್ಲ . ದಾವಾ ಸ್ವತ್ತು 4 ನೇ ಪ್ರತಿವಾದಿಯ ಸಂಪೂರ್ಣ ಹಕ್ಕು ಮತ್ತು ಸ್ವಾಧೀನತೆಗೆ ಒಳಪಟ್ಟಿದ್ದು ನಮಗೆ ಯಾರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**